ಪ್ರೀಮಿಯಂ ವಸೂಲ್ಮಾಡಬಾರದೆಂದು ಸೂಚನೆ ನೀಡಿದ್ದರೂ ಅದು ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳುತ್ತಿದ್ದಾನೆ. ಅಂಥ ದೂರು ಇದ್ದು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಗಂಗಾಧರ ಗೌಡ:- ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದುದು. ಇವರು ನಿರ್ಣಯ ತೆಗೆದುಕೊಂಡು ಪ್ರೀಮಿಯಂ ರದ್ದುಪಡಿಸಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಒಂದು ವರ್ಷದಿಂದ ನನ್ನ ತಿಳಿವಳಿಕೆ ಪ್ರಕಾರ ಇವತ್ತಿನವರೆಗೆ ರೈತರಿಂದ ಬಲಾತ್ಕಾರವಾಗಿ ಪ್ರೀಮಿಯಂ ವಸೂಲ್ಮಾಡುತ್ತಿದ್ದಾರೆ. ಬ್ಯಾಂಕಿನವರು ಏನು ಹೇಳುತ್ತಿದ್ದಾರೆಂದರೆ, ಸರ್ಕಾರದವರು ಹಣ ತುಂಬಿಲ್ಲ, ಸುಮ್ಮನೆ ಆಶ್ವಾಸನೆ ಕೊಡುತ್ತಿದ್ದಾರೆ, ಅದಕ್ಕೆ ನಾವು ಹೊಣೆಗಾರರಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ರೈತರು ಕಷ್ಟಕ್ಕೆ ಒಳಗಾಗಿದ್ದಾರೆ. ಆ ಆಶ್ವಾಸನೆಯಿಂದ ನಮಗೆ ಲಾಭವಾಗುತ್ತದೆಂದು ತಿಳಿದುಕೊಂಡಿದ್ದೇನೆ, ಮಂತ್ರಿಗಳ ಆಶ್ವಾಸನೆಯನ್ನು ನಂಬಿದ್ದೇನೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು. ಇನ್ನು ಸರ್ಕುಲರ್ ಕಳುಹಿಸುತ್ತೇವೆಂದರೆ ಒಂದೆರಡು ವರ್ಷವಾಗುತ್ತದೆ, ಅಷ್ಟರಲ್ಲಿ ಅವರಿಂದ ವಸೂಲ್ಮಾಡಿ ಆಗುತ್ತದೆ. ಇದಕ್ಕೆ ಕಂದಾಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಸರ್ಕಾರದಿಂದ ಕೊಡತಕ್ಕ ಹಣವನ್ನು ಬ್ಯಾಂಕಿಗೆ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಈಗಾಗಲೇ ಹೇಳಿದ್ದೇನೆ, ಅಮೆಂಡ್‌ಮೆಂಟ್ ಆದ ಮೇಲೆ ಪ್ರೀಮಿಯಂ ವಸೂಲ್ಮಾಡಬಾರದೆಂದು ಸುತ್ತೋಲೆ ಕಳುಹಿಸಿದ್ದೇವೆ. Accordingly Sec. 53 of KLR Act 61 was amended by Act No.19 of 1986 with effect from 17-10-84. ಮತ್ತೆ ಫರ್ದರ್ ಅಮೆಂಡ್‌ಮೆಂಟ್ ಮಾಡಿ ಇದು ಸಂಪೂರ್ಣ (ಡಿ) ಕ್ಲಾಸ್ ಲ್ಯಾಂಡ್ ಇರತಕ್ಕಮ್ಮ, ಹತ್ತು ಎಕರೆಗೆ ಪ್ರೀಮಿಯಂ ಎಕ್ಸಮ್ಪ್ಟ್ ಮಾಡುತ್ತೇವೆಂದು ಹೇಳಿದ್ದೇವೆ. ದೂರು ಏನಾದರೂ ಇದ್ದರೆ ಹೇಳಿ, ಖಂಡಿತ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರ ಗೌಡ:- ಇದು ಡಿಸಿ. ಯವರ ಹತ್ತಿರ ಮಾತನಾಡುವ ವಿಚಾರ ಅಲ್ಲ, ಸರ್ಕಾರದವರು ಬ್ಯಾಂಕಿಗೆ ಹಣ ತುಂಬಿಸಬೇಕು. ಹಣ ತುಂಬಿಸದೆ ಬರೀ ಸರ್ಕುಲರ್ ಕಳುಹಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಸಹಕಾರ ಇಲಾಖೆಯವರೊಡನೆ ಮಾತನಾಡಿ ಹಣ ತುಂಬಿ ಇವರು ಕೊಟ್ಟ ಮಾತನ್ನು ನಡೆಸಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಆಗಲೇ ಹೇಳಿದ್ದೇನೆ. ಡ್ಯೂ ಇರತಕ್ಕದ್ದು 3 ಕೋಟಿ 15 ಲಕ್ಷ ರೂಪಾಯಿ ಪಿಎಲ್‌ಡಿ. ಬ್ಯಾಂಕಿಗೆ ನಾವು ನೇರವಾಗಿ ತುಂಬತಕ್ಕ ಹಣ ಇದು. ಇದರ ಜವಾಬ್ದಾರಿ ಸರ್ಕಾರಕ್ಕೆ ಇದೆ. ತಾವು ಅನೇಕ ಸಲ ಬರುತ್ತಿರುತ್ತೀರಿ, ನನಗೆ ಹೇಳಿದ್ದರೆ ತಕ್ಷಣ ಫೋನ್ ಮಾಡಿ ತಿಳಿಸುತ್ತಿದ್ದೆ. ಆದರೆ ಇವತ್ತು ಹೊಸದಾಗಿ ಪ್ರಸ್ತಾಪ ಮಾಡುತ್ತಿದ್ದೀರಿ. 3 ಕೋಟಿ 15 ಲಕ್ಷ ರೂಪಾಯಿ ಸರ್ಕಾರದಿಂದ ತುಂಬುವಂತೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆ ಮಾತನಾಡಿ ಇದನ್ನು ಸೆಟ್‌ರೈಟ್ ಮಾಡತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್:- ಗಂಗಾಧರ ಗೌಡರು ಕೇಳಿದ ಹಾಗೆ ಅತೀ ಸಣ್ಣ ರೈತರು ಎರಡು ಎಕರೆ ಜಮೀನು ಭೂಸುಧಾರಣೆಯಲ್ಲಿ ಯಾರಿಗೆ ಬಂದಿತ್ತು ಅಂಥವರು ಎರಡು ಸಾವಿರ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಪಡೆದು ಅವನ್ನು ಕಟ್ಟಿ ಪಟ್ಟಾ ಪಡೆದಿದ್ದಾರೆ. ಅಂಥವರದು ಮನ್ನಾ ಆಗಿಲ್ಲ, ಪ್ರೀಮಿಯಂ ಮನ್ನಾ ಆಗಿದೆ ಎಂದು ಏನು ಹೇಳುತ್ತಾರೆ ಆದರೂ ಕೆಲವು ತಾಲ್ಲೂಕುಗಳಲ್ಲಿ ಇನ್ನೂ ವಸೂಲು ಮಾಡುತ್ತಿದ್ದಾರೆ. ಉದಾಹರಣೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಸೂಲು ಮಾಡಿದ್ದಾರೆ. ಭೂಸುಧಾರಣೆಯಲ್ಲಿ ಪಡೆದಿರತಕ್ಕ ಎರಡು ಎಕರೆ ಹೊಂದಿರತಕ್ಕ ಸಣ್ಣ ರೈತರಿಗೆ ವಸೂಲು ಮಾಡತಕ್ಕ ಹಿಂಸೆಯನ್ನು ಭೂ ಅಭಿವೃದ್ಧಿ ಬ್ಯಾಂಕಿನವರು ಕೊಡುತ್ತಿದ್ದಾರೆ. ಈಗ ಮಂತ್ರಿಗಳು ಅದು ರದ್ದು ಮಾಡುತ್ತೇವೆ, ದುಡ್ಡು ಕಟ್ಟಿಸುತ್ತೇವೆ ಎಂದು ಆಜ್ಞೆ ಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದಿಸುತ್ತೇನೆ.

ಪರಿಶಿಷ್ಟ ಜಾತಿಗೆ ಸೇರಿದ ಮೀನುಗಾರರಿಗೆ ವಸತಿ ಗೃಹ

145 (578) ಶ್ರೀ ಮನೋಹರ ಉಮಾಕಾಂತ ಐನಾಪುರ (ಬೆಳ್ಳಿ):- ಮುನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ತಾಲ್ಲೂಕು, ಬೆಳ್ಳುಬ್ಬಿ ಕ್ಷೇತ್ರದ ಪರಿಶಿಷ್ಟ ಜಾತಿ ಮೀನುಗಾರರಿಗೆ ವಸತಿ ಗೃಹಗಳನ್ನು ನಿರ್ಮಿಸಿಕೊಡುವ ಪ್ರಸ್ತಾವನೆ ಇರುವುದು ನಿಜವೇ?

ಅ) ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಎ. ಎಂ. ಬೆಳ್ಳಿಯಪ್ಪ:- ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ರಾಜ್ಯ ಸಚಿವರು.

ಆ) ಹೌದು

ಅ) 1992-93 ರಲ್ಲಿ ಇದನ್ನು ಪರಿಶೀಲಿಸಲಾಗುವುದು.

ಶ್ರೀ ಮನೋಹರ ಉಮಾಕಾಂತ ಐನಾಪುರ:- ಸಭಾನ್ಯಕ್ಷರೇ, ನಾನು ಇಂದಿ ತಾಲ್ಲೂಕಿನ ಬೆಳ್ಳುಳ್ಳಿ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮೀನುಗಾರರಿಗೆ ವಸತಿ ಗೃಹಗಳನ್ನು ನಿರ್ಮಿಸಲು ಪ್ರಸ್ತಾವನೆ ಇರುವುದು ನಿಜವೇ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ, ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ಎಂಬುದಕ್ಕೆ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮೀನುಗಾರರು ಸ್ವಲ್ಪ ಜಾಸ್ತಿ ಇದ್ದಾರೆ. ಈ ಇಲಾಖೆಯಿಂದ ಪರಿಶಿಷ್ಟ ಜಾತಿ ಮೀನುಗಾರರಿಗೆ ಎಷ್ಟು ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ? ಈ ಯೋಜನೆಯಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ? ಮತ್ತು ಈ ಯೋಜನೆಯನ್ನು ಯಾವ ಯಾವ ಗ್ರಾಮಗಳಿಗೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕೆಂದು ನಾನು ಬಯಸುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಐನಾಪುರ ಅವರು ಅವರ ಗ್ರಾಮಕ್ಕೆ ಮನೆಗಳು ಬೇಕು ಎಂದು ನನಗೆ ಒಂದು ಪತ್ರ ಬರೆದಿದ್ದಾರೆ. ಆ ಮನೆಗಳನ್ನು ನಾವು ಸ್ಯಾಂಕ್ಷನ್ ಮಾಡುತ್ತೇವೆ. ಅದೂ ಅಲ್ಲದೆ ಬೇರೆ ಶಾಸಕರು ಕೂಡ ಕಾಗದಗಳನ್ನು ಬರೆದಿದ್ದಾರೆ. ನಾವು ಆದಷ್ಟು ಮಟ್ಟಿಗೆ ಪ್ರಯತ್ನ ಪಟ್ಟು ಮನೆಗಳನ್ನು ಕಟ್ಟಿಸಲಿಕ್ಕೆ ಪ್ರಯತ್ನ ಪಡುತ್ತೇವೆ. ಮೊನ್ನೆ ಮಾನ್ಯ ಶಿವಾನಂದ ಕೌಜಲಗಿ ಅವರು ಕೇಳಿದ ಪ್ರಶ್ನೆಗೆ ಇದೇ ವಿಷಯದಲ್ಲಿ ಉತ್ತರ ಹೇಳಿದ್ದೇನೆ. ಅದನ್ನೇ ಈಗ ಪುನರುಚ್ಚರಿಸುತ್ತಿದ್ದೇನೆ. ಏನೆಂದರೆ There are 3 conditions to be fulfilled and that I want to impress upon the respective MLAs also, that is the condition imposed by the Central Government.

ಅಧ್ಯಕ್ಷರು:- ಮೂರು ಕಂಡೀಷನ್ಸ್ ಇವೆ. The question should be precise, the Answer should be crisp . ಕಾವೇರಿ ಎಕ್ಸ್‌ಪ್ರೆಸ್ ತರಹ ಹೋಗಬೇಕು ನೀವು. ಏಕೆಂದರೆ ಒಂದೇ ಗುಂಟೆ ಇರುವುದು ನನಗೆ.

SRI A.M. BELLIYAPPA:- Alright. However I assure Mr. Ainapur that I will take into consideration your requirement and I will tell the House after April.

MR. SPEAKER:- He has now reached the destination.

ಶಹಾಬಾದ್ ಪಟ್ಟಣದಲ್ಲಿ ವಾಯು ಮಾಲಿನ್ಯ

149 (355) ಶ್ರೀ ಬಾಬುರಾವ್ ಚಿಮಣ್ (ಶಹಾಬಾದ್):- ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಖಾತೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್ ಪಟ್ಟಣದಲ್ಲಿ ಹೆಚ್.ಎಂ.ಪಿ. ಕಾರ್ಖಾನೆಯ ಧೂಳು ವಿಪರೀತ ಇದ್ದು ನಾಗರೀಕರ ಆರೋಗ್ಯ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಹೆಚ್.ಎಂ.ಪಿ. ಕಾರ್ಖಾನೆಯವರು ಹೈಕೋರ್ಟಿನಿಂದ ತಡೆ ಆಜ್ಞೆ ತಂದು ಕಂಪನಿ ನಡೆಸುತ್ತಿರುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ:- (ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಖಾತೆಯ ಸಚಿವರು.)

ಅ) ಬಂದಿದೆ.